ವಿವರಗಳೂ ಅಹಂಕಾರವಾಗದೆ, ತೋರಿಕೆಯದಾಗದೆ ಯಾವೊಬ್ಬ ಪ್ರತಿಭಾವಂತ ಹೆಣ್ಣುಮಗಳ ಜೀವನದಲ್ಲೂ ಘಟಿಸಬಹುದಾದ ಸಂಗತಿಗಳು ಎನ್ನುವ ಧಾಟಿಯಲ್ಲಿ ಮಾತ್ರ ಹೇಳುವುದಿಲ್ಲ, ತನ್ನ ಬದುಕನ್ನು ಈ ಎಲ್ಲವೂ ಸೇರಿ ಸ್ವಾರಸ್ಯಪೂರ್ಣವಾಗಿಸಿವೆ, ಚಂದವಾಗಿಸಿವೆ ಎನ್ನುವ ಹಾಗೆ ಹೇಳುತ್ತಾರೆ. ಗಂಡಸರನ್ನು ಕಟಕಟೆಯಲ್ಲಿ ನಿಲ್ಲಿಸಿ ತನ್ನಂಥ ಅಸಾಮಾನ್ಯ ಹೆಣ್ಣನ್ನು ಇವರು ಅದು ಹೇಗೆ ಬಯಸಬಹುದು ಎನ್ನುವ ಆತ್ಮರತಿಯಿಲ್ಲದೆ ಹೇಳುವುದು ಇವರಿಗೆ ಸಾಧ್ಯವಾಗಿದೆ. ತನಗೆ ಬಂದ ಅಸಂಖ್ಯ ಪ್ರೇಮ ಪತ್ರಗಳು, ತನ್ನೊಂದಿಗೆ ಬದುಕ ಬಯಸಿದ, ನೀವು ಇಲ್ಲೇ ಆಸ್ಪಾಂನಲ್ಲೇ ಇರಬೇಕು, ಏಕೆಂದರೆ ನಾನು ನಿಮ್ಮನ್ನು ಪ್ರೀತಿಸುತ್ತೇನೆ ಎಂದ ಹದಿನಾರು ಹದಿನೇಳರ ಹುಡುಗನನ್ನು ಇವರು ನಿಭಾಯಿಸಿದ್ದನ್ನು ನೋಡಿದರೆ ಇವರ ಮೇಲಿನ ಗೌರವ ಹೆಚ್ಚಾಗುತ್ತದೆ. ಅಣ್ಣ ಅತ್ತಿಗೆಯವರೆಗೆ ಈ ವಿಷಯ ಹೋಗದಂತೆ, ತಾವೇ ಆ ಹದಿಹರೆಯದ ಹುಡುಗನನ್ನು ವಾತ್ಸಲ್ಯದಿಂದ ತಾಳ್ಮೆಯಿಂದ ಮಾತನಾಡಿಸಿ, ಆತನಿಗೆ ವಾಸ್ತವವನ್ನು ಮನದಟ್ಟು ಮಾಡಿಕೊಟ್ಟು ಕಳಿಸುತ್ತಾರೆ – ಆ ಹುಡುಗ ಕೇಳಿದ ತಮ್ಮ ಫೋಟೋವನ್ನೂ ಕೊಟ್ಟು!

ಇವರನ್ನು ಬಲು ಇಷ್ಟಪಟ್ಟ ಇನ್ನೊಬ್ಬ ಹುಡುಗ ಈಗ ವಯಸ್ಕನಾಗಿ, ಆತನಿಗೆ ಅರವತ್ತೋ ಏನೋ ವಯಸ್ಸಾಗಿ, ಮದುವೆಯೊಂದರಲ್ಲಿ ಇಬ್ಬರೂ ಭೇಟಿಯಾಗಿ ಆತ ತನ್ನ ತೋಳುಗಳನ್ನು ತೆರೆದು ಆಹ್ವಾನಿಸಿದಾಗ, ಆ ಅಪ್ಪುಗೆಯನ್ನು ಒಪ್ಪುತ್ತಾರೆ. ಮುಂದೆ ಆತ, ತನ್ನ ಬದುಕಿನ ಸ್ಮರಣೀಯ ಗಳಿಗೆ ಇದು ಎಂದದ್ದನ್ನೂ ಬರೆಯುತ್ತಾರೆ. ಗಂಡು ಹೆಣ್ಣಿನ ಸಂಬಂಧಗಳ ಚೆಲುವು ಮತ್ತು ಘನತೆ ಎರಡನ್ನೂ ಇವರು ಇಲ್ಲಿ ಚಿತ್ರಿಸುವ ಬಗೆ ಇವರನ್ನು ನಾವೂ ಪ್ರೀತಿಸುವಂತೆ ಮಾಡುತ್ತದೆ.

ಲೋಕ ಕಲ್ಮಶವೆಂದು ತಿಳಿಯಲಾಗದ ಸಂಬಂಧಗಳ ವಿನ್ಯಾಸವನ್ನು ಹೇಳುವಾಗಲೂ ಹೆಣ್ಣನ್ನು ಅದೇ ಕೊಳಕು ದೃಷ್ಟಿಯಿಂದ ನೋಡುವ ವಾಸ್ತವದಲ್ಲೂ ಲೀಲಾವತಿಯವರು ಇವುಗಳನ್ನು ಬರೆಯುತ್ತಿರುವುದನ್ನೇ ನಾನು ಹೊಸ ಭಾಷೆಯ, ಹೊಸ ಸಂವೇದನೆಯ ನಿಟ್ಟಿನಲ್ಲಿ ನೋಡಬೇಕೆಂದು ಒತ್ತಾಯಿಸುತ್ತೇನೆ. ಬಂಡೆಯನ್ನು ಬದಲಾಯಿಸುವ, ಕಲ್ಲು ಕರಗುವ ಸಮಯದ ಇಂಥ ನಿರೂಪಣೆಗಳು ವಹಿಸುವ ಪಾತ್ರ ಬಲು ದೊಡ್ಡದು, ಐತಿಹಾಸಿಕವಾದದ್ದು.

ಇಷ್ಟೇ ದಿಟ್ಟತನವನ್ನು ಲೀಲಾವತಿ ತಮ್ಮ ವೃತ್ತಿ ಬದುಕಿನ ಸವಾಲುಗಳನ್ನು ಎದುರಿಸುವಾಗಲೂ ತೋರುತ್ತಾರೆ. ಅನ್ಯಾಯವನ್ನು ಪ್ರತಿಭಟಿಸದೇ ಒಳಗೇ ಕೊರಗಿಯೇ ಜೀವನ ಮುಗಿಸುವ ಹೆಣ್ಣುಮಕ್ಕಳ ಎದುರಿಗೆ ಇವರ ಬಿಸಾತಿಲ್ಲದ ಪ್ರತಿರೋಧ ಗಮನ ಸೆಳೆಯುತ್ತದೆ. ರಾಜಿಯ ಪ್ರಶ್ನೆಯೇ ಇಲ್ಲದಂತೆ ಕಿಚ್ಚಿಲ್ಲದ ಬೇಗೆಯ ಏರಿಲ್ಲದ ಗಾಯಕ್ಕೆ ತುತ್ತಾದ ಹೆಣ್ಣೊಬ್ಬಳು ಅದೆಲ್ಲ ತನ್ನ ಪೂರ್ವಜನ್ಮದ್ದೋ ಎನ್ನಿಸುವಂಥ ಹೊಸ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾದದ್ದು ನಾವು ಮತ್ತೆ ಮತ್ತೆ ಹೇಳಿಕೊಳ್ಳುವ ಹೆಣ್ಣಿನ ಅಗಣಿತ ಆತ್ಮಬಲದಿಂದ.

ಹೆಣ್ಣು ಬದುಕನ್ನು ಗೆಲ್ಲುವ ದಾರಿಯೇ ಬೇರೆ, ಅವಳ ಗೆಲುವಿನ ವ್ಯಾಖ್ಯಾನವೇ ಬೇರೆ. ಅವಳಿಗೆ ಕಲೆಯ ಸಖ್ಯ ಎನ್ನುವುದು ಬದುಕನ್ನು ಗಂಡಾಳಿಕೆಯ ಜೊತೆಗಿನ ಯುದ್ಧಕ್ಕೆ ಸಿಕ್ಕ ಹತ್ಯಾರವಲ್ಲ, ಅದು ತನ್ನೊಂದಿಗಿನ ಯುದ್ಧಕ್ಕಾದರೂ, ಆತನಿಗಿರುವ ನೈತಿಕ ಬಲ ಯಾವುದು ಎನ್ನುವುದನ್ನು ತನಗೆ ತಾನೇ ಪ್ರಶ್ನಿಸಿಕೊಳ್ಳುವ ನೈತಿಕ ಮಾನದಂಡ ಎಂದು ನಾನಂತೂ ನಂಬುತ್ತೇನೆ. ಸುಬ್ಬಲಕ್ಷ್ಮಿಯವರನ್ನು ಕುರಿತೂ ನನಗೆ ಗಾಢವಾಗಿ ಅನ್ನಿಸುವುದು ಹೀಗೆಯೇ. ಹೆಣ್ಣಿನ ಆಯುಧಗಳೇ ಬೇರೆ, ವರಸೆಯೇ ಬೇರೆ. ಲೀಲಾವತಿಯವರ ಬದುಕಿನಲ್ಲಿ ಅವರಿಗೆ ಒತ್ತಾಸೆಯಾಗಿ ನಿಂತ ಸಜ್ಜನರ ಪಡೆಯೇ ಇದೆ. ಅವರನ್ನು ಕುರಿತ ಲೀಲಾವತಿಯವರ ಪ್ರೀತಿ, ವಿಶ್ವಾಸ, ಕೃತಜ್ಞತೆ ಎಲ್ಲವೂ ಇಲ್ಲಿದೆ. ಆದರೆ ಲೀಲಾವತಿಯವರಲ್ಲಿ ಅಚಲವಾದ ಆತ್ಮಬಲವಿಲ್ಲದಿದ್ದರೆ ಈ ಎಲ್ಲವೂ ಅನುಕಂಪದ ಸೆಲೆಗಳಾಗಿ ಇವರು ಕರುಣೆಯ ಕೂಸಾಗಿಬಿಡುತ್ತಿದ್ದರು. ಆದರೆ ಅದಕ್ಕೆ ಅವಕಾಶವೇ ಇಲ್ಲದಂತೆ ಲೀಲಾವತಿಯವರು ಲೀಲೆಯಲಿ ಯಾವುದೂ ವಿಫಲವಲ್ಲ ಎನ್ನುವ ಅದಮ್ಯ ಪ್ರೀತಿಯನ್ನು ತನ್ನ ಬಗೆಗೆ, ಆತ್ಮದಿಂದಲೂ ತನ್ನನ್ನು ಆವರಿಸಿದ ಕಲೆಯ ಬಗೆಗೆ ಉಳಿಸಿಕೊಂಡಿರುವುದು ಇವರ ಬದುಕಿನ ಅಮೃತಾನ್ನದ ಮೂಲ ಸಾಮಗ್ರಿಯಾಗಿದೆ.

ಈ ಬಗೆಯ ಕೃತಿಗಳನ್ನು ತುಸು ಅತಿ ಎನ್ನುವ ಉತ್ಸಾಹದಲ್ಲಿ ಚರ್ಚಿಸುವುದನ್ನು ನಾನು ಈ ಕಾಲದ ಕರೆ ಎನ್ನುತ್ತೇನೆ. ಹೆಣ್ಣು ತನ್ನನ್ನು ತಾನು ಅರಿಯಲೆಷ್ಟೋ ಅಷ್ಟೇ ಗಂಡಿಗೂ ತನ್ನ ಮುಖಕ್ಕೆ ಹಿಡಿದುಕೊಳ್ಳಬೇಕಾದ ಕನ್ನಡಿಗಳು ಇಂಥ ನಿರೂಪಣೆಗಳು.

●